ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

2

ಇಲಾಖೆ / ವಿಷಯ : DEPARTMENT / SUBJECT: ಸಭಾಪತಿಯವರು

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 30/3/21

ಕೃಷ್ಣಪ್ಪನವರ ರಾಜಕಾರಣ ಮಾದರಿ

ವಿಶ್ವ 30/3/21

ನಾಗಮಂಗಲ: ಇಂದು ಕಂಡು ಬರುತ್ತಿರುವ ರಾಜಕಾರವನ್ನು ನೋಡಿದಾಗ ಬೇಸರ ಹುಟ್ಟುತ್ತದೆ. ಆದರೆ ಇತ್ತೀಚೆಗೆ ನಿಧನರಾದ ಮಾಜಿ ಮಂತ್ರಿ ರಾಜಕಾರಣದಲ್ಲಿ ನಡೆದು ಬಂದ ದಾರಿ ಇಂದಿನ ರಾಜಕಾರಣಗಳಿಗೆ ಮಾದರಿಯೆಂದು ವಿಧಾನ ಮಂಡಲ ಉಪಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಾಜಿ ಮಂತ್ರಿ ನಾಗಮಂಗಲದ ಎಚ್.ಟಿ.ಕೃಷ್ಣಪ್ಪನವರ ಶ್ರದ್ಧಾಂಜಲಿ ಸಭೇಯಲ್ಲಿ ಮಾತನಾಡಿದ ಅವರು, ಕ್ರಿಷ್ಣಪ್ಪನವರು ಅಧಿಕಾರದಲ್ಲಿ ಇದ್ದಂದಿನಿಂದ ನಡೆದು ಬಂದ ದಾರಿಯನ್ನು ಹಿಂತಿರುಗಿ ನೋಡಿದಾಗ ಅವರು ಯಾವ ವಿಷಯದಲ್ಲಿ ಅಜಾತ ಶತ್ರು ಎಂದು ಕರೆಸಿಕೊಂಡರು ಎಂಬುದುದರ ಅರಿವಾಗುತ್ತದೆ. ಏಕೆಂದರೇ ಅವರು ಚುನಾವಣೆಯ ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸುತ್ತಿದ್ದರು ಎಂದರು.

ಆದರೇ ಒಮ್ಮೊಮ್ಮೆ ಇಂದಿನ ರಾಜಕಾರಣ ಹೋಗುತ್ತಿರುವ ಪರಿಯನ್ನು ಗಮನಿಸಿದರೆ ತಮ್ಮ ಆಪ್ತರ ಬಳಿ ಬೇಸರಿಸುತ್ತಿದ್ದರೆಂದು ತಿಳಿದು ಬಂದಿರುತ್ತದೆ, ಅವರು ತಮ್ಮ ಬಳಿ ಕೆಲಸಕ್ಕಾಗಿ ಬರುವವರಿಗೆ ಸಮಾಧಾನವಾಗಿ ಉತ್ತರ ಹೇಳುತ್ತಿದ್ದ ರೀತಿ ಇನ್ನೂ ಅವರು ಜನಮಾನಸದಲ್ಲಿ ಉಳಿಯಲು ಕಾರಣವಾಯಿತೆಂದರೇ ತಪ್ಪಾಗಲಾರದು ಎಂದು ಹೇಳಿದರು. ಮಾಜಿ ಸ್ಪೀಕರ್ ರಮೇಶ್ ಕುಮಾರ್ ಮಾತನಾಡಿ, ಅವರನ್ನು ಒಂದು ದಿನದ ಶಾಸಕರೆಂದು ಆತ್ಮೀಯರು ಕರೆದಾಗ ಮುಗುಳ್ನಗೆಯೇ ಉತ್ತರವಾಗಿತ್ತು, ಯಾವ ದಿನದಲ್ಲೂ ಅವರು ಬೇಸರಗೊಂಡವರಲ್ಲ, ನಮ್ಮ ಕಾಲದಲ್ಲಿ ಅವರು ನಮಗೆ ಮಾರ್ಗದರ್ಶಕರಾಗಿದ್ದರು, ಹಲವಾರು ಹಗರಣಗಳನ್ನು ಮೈಗೆ ಅಂಟಿಸಿಕೊಂಡರೂ ಯಾವ ಎಗ್ಗಿಲ್ಲದೇ ರಾಜಕಾರಣ ಮಾಡುವವರಿಗೆ ಕೃಷ್ಣಪ್ಪನವರು ಒಂದು ಅಪವಾದ ಎಂದರು. ಮಾಜಿ ಶಾಸಕ ಚೆಲುವರಾಯಸ್ವಾಮಿ, ಮಾಜಿ ಸಂಸದ ಶಿವರಾಮೇಗೌಡ, ಶಾಸಕ ಸುರೇಶ್ ಗೌಡ, ಜವರೇಗೌಡ ಮುಂತಾದವರು ಇದ್ದರು.